ಯೋಜನೆಯೊಂದನ್ನು ಮಂಜೂರು ಮಾಡಬೇಕೆಂದು ಅಲ್ಲಿಯ ಜನರ ಬಹು ದಿನಗಳ ಬೇಡಿಕೆಯಾಗಿದೆ. ಅವರ ಈ ಬೇಡಿಕೆಯನ್ನು ಅನುಲಕ್ಷಿಸಿ ಜನಾರೋಗ್ಯ ಶಿಲ್ಪ ಇಲಾಖೆಯವರು ನೀರು ಪೂರೈಕೆಯ ಅಂಗವಾಗಿ ಕಾರ್ಯಕ್ರಮವನ್ನು ಆರಂಭಿಸಿ ಊರಿನ ಎತ್ತರದ ಜಾಗದ ಮೇಲೆ ನೀರು ಸಂಗ್ರಹಣೆ ಮಾಡಲು ದೊಡ್ಡದಾದ ಟ್ಯಾಂಕ್ ಒಂದನ್ನು ನಿರ್ಮಿಸಿ ಇಂದಿಗೆ ಮೂರು ವರ್ಷಗಳಾದವು.

ನಾನು ಈ ವಿಷಯವನ್ನು ಕಳೆದ ವರ್ಷ ಸದನದಲ್ಲಿ ಪ್ರಸ್ತಾಪ ಮಾಡಿದಾಗ ಸನ್ಮಾನ್ಯ ಸಚಿವರು ನನಗೆ ಆಶ್ವಾಸನೆ ನೀಡಿದ ಪ್ರಕಾರ ಒಂದೆರಡು ಕಡೆ ಕೊಳವೆ ಬಾವಿಗಳನ್ನು ತೋಡಲಾಯಿತು. ಆದರೆ ಅದರಲ್ಲಿ ಸಾಕಷ್ಟು ನೀರು ಕಾಣಿಸಲಿಲ್ಲ. ಕಳೆದ ವಿಧಾನಸಭಾ ಅಧಿವೇಶನದಲ್ಲಿ ನಾನು ಮತ್ತೆ ಆ ವಿಷಯವನ್ನು ಕುರಿತು ಗಂಭೀರವಾಗಿ ಪ್ರಸ್ತಾಪಿಸಿದಾಗ ಸಾಸಕರೊಂದಿಗೆ ಮತ್ತು ತೆಗ್ಗಿ ಗ್ರಾಮದ ಸಾರ್ವಜನಿಕರೊಂದಿಗೆ ಸಮಾಲೋಚಿಸಿ ಕೊಳವೆ ಬಾವಿಗಳನ್ನು ತೋಡಿಸಿ ಕೊಡುವುದಾಗಿ ಮಾನ್ಯ ಸಚಿವರಾದ ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಭರವಸೆ ನೀಡಿದ್ದರು. ಅವರ ಭರವಸೆಯಂತೆ ಕೊಳವೆ ಬಾವಿ ತೋಡುವ ಕೆಲಸ ನಡೆಯಿತು. ಆದರೆ ಅಧಿಕಾರಿಗಳು ತಮ್ಮ ಎಂದಿನ ದಿವ್ಯ ನಿರ್ಲಕ್ಷತನದಿಂದ ತಪ್ಪು ದೇ ಆದ ರೀತಿಯಲ್ಲಿ ಕಾರ್ಯ ನಿರ್ವಹಿಸಿ ಮತ್ತೊಂದು ಕಡೆ ಅಂದರೆ ೩ ಕಿ.ಮೀ. ದೂರ ಹಿದ್ದಾಪುರದ ಹತ್ತಿರ ಕೊಳವೆ ಬಾವಿಯೊಂದನ್ನು ತೋಡಿಸಿದರು ದುರ್ದೈವದಿಂದ ಅದು ಕೂಡ ಅಯಶಸ್ವಿ ಯಾಯಿತು. ಈ ಕೆಲಸ ಮಾಡುವ ಮುನ್ನ ಸಂಬಂಧಿಸಿದ ಅಧಿಕಾರಿಗಳು ನನ್ನೊಡನೆ ಹಾಗೂ ತೆಗ್ಗಿ ಮತ್ತು ಹಿದ್ದಾಪುರ ಗ್ರಾಮದ ಜನರೊಂದಿಗೆ ಸಮಾಲೋಚಿಸಿದ್ದರೆ ಕೆಲಸ ಯಶಸ್ವಿಯಾಗಿರುತ್ತಿತ್ತು. ಅಧಿಕಾರಿ ಶಾಹಿಯ ಯಾಂತ್ರಿಕತ್ವದ ನೀತಿಯಿಂದಾಗಿ ದೊಡ್ಡ ಗ್ರಾಮವಾದ ತೆಗ್ಗಿಯವರೂ, ಕುಡಿಯುವ ನೀರಿನಿಂದ ವಂಚಿತವಾಗಬೇಕಾಗಿದೆ. ಗ್ರಾಮದ ಸುತ್ತ ಮುತ್ತ ಬೇಕಾದಷ್ಟು ಜಲ ಸಂಪನ್ಮೂಲವಿದ್ದರೂ, ಅಧಿಕಾರಿಗಳು ಬೇಜವಾಬ್ದಾರಿತನದಿಂದ ಕೊಳವೆ ಬಾವಿ ತೋಡಿಸಿ, ಅರ್ಧಕ್ಕೆ ನಿಂತಿರುವ ನೀರಿನ ಟ್ಯಾಂಕ್ ಪರೆಗೆ ಪೈಪ್‌ಗಳ ಮುಖಾಂತರ ನೀರು ಪೂರೈಸಲಾಗಲಿಲ್ಲ. ಕಾರಣ ಕೂಡಲೇ ಸನ್ಮಾನ್ಯ ಸಚಿವರು ಅತ್ಯಂತ ತೀವ್ರ ಕಾಳಜಿ ವಹಿಸಿ, ಈ ಗ್ರಾಮದಲ್ಲಿ ಅರ್ಧಕ್ಕೆ ನಿಂತಿರುವ ನೀರು ಪೂರೈಕೆ ಯೋಜನೆಯನ್ನು ಪೂರ್ತಿ ಮಾಡಲು ಜನಾರೋಗ್ಯ ಶಿಲ್ಪ ವಿಭಾಗ, ಬಿಜಾಪುರ, ಇವರಿಗೆ ಕಟ್ಟುನಿಟ್ಟಾದ ಆದೇಶವನ್ನು ನೀಡಬೇಕೆಂದು ತಮ್ಮ ಮೂಲಕ ಸನ್ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಗ್ರಾಮೀಣ ಅಭಿವೃದ್ಧಿ ಸಚಿವರಿಂದ ಅವರಿಗೆ ಉತ್ತರವನ್ನು ತರಿಸಿ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್	(ಗೈರುಹಾಜರು)
ಶ್ರೀ ವಿನಯಕುಮಾರ್ ಸೊರಕೆ	—,,—
ಶ್ರೀ ಜೆ. ಎಸ್. ಆಚಾರ್	—,,—
ಶ್ರೀ ಬಸವರಾಜ್	—,,—
ಶ್ರೀ ಬಿ. ಎಂ. ಉಮಾರಬ್ಬ	—,,—
ಶ್ರೀ ಪಶಮಕ್ಕಿ ರತ್ನಾಕರ್	—,,—

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೇ ನಿನ್ನೆ ನನ್ನ ಹಿಳಿಕೆ ಒಂದು ಸೂಚನೆ ಇತ್ತು. ಅದು ಏನಾಯಿತು ?

ಅಧ್ಯಕ್ಷರು.—ಸೋಮವಾರ ತೆಗೆದುಕೂಳ್ಳೋಣ.

ಶ್ರೀ ಬಿ. ಲಕ್ಕಪ್ಪ.—ನಾನು ಕೇಳಿದ್ದ ಹಿಳಿಕೆ ಸೂಚನೆಗೆ ಉತ್ತರ ನನಗೆ ಬಂದಿದೆ. ಅದು ಸದನಕ್ಕೆ ಗೊತ್ತಾಗಬೇಕು, ಅದನ್ನು ಮಾನ್ಯ ಸಚಿವರು ದಯಮಾಡಿ ಓದಿ ತಿಳಿಸಬೇಕು.

ಅಧ್ಯಕ್ಷರು.—ತಾವುಗಳು ಕುಳಿತುಕೂಳ್ಳಿ ದಯವಿಟ್ಟು. ಈಗ ಒಂದು ಪ್ರಕಟಣೆ ಇದೆ.

ಪ್ರಕಟಣೆ

ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕಳಕಂಡ ಸಂದೇಶವು ಬಂದಿದೆ ;

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಯ ಪ್ರಕಾರ, ದಿನಾಂಕ ೨೯ನೇ ಫೆಬ್ರುವರಿ, ೧೯೮೮ರಂದು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಯಾವುದೇ

ತಿದ್ದುಪಡಿಗಳಿಲ್ಲದೆ ಅಂಗೀಕಾರ ಪಡೆದ **ಈ ಕೆಳಗೆ** ನಮೂದಿಸಿರುವ ವಿಧೇಯಕಗಳನ್ನು ಈ ಮೂಲಕ ಕಳುಹಿಸುತ್ತಿದ್ದೇನೆ.

೧) ೧೯೮೭ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆಗಳ (ತಿದ್ದುಪಡಿ) ವಿಧೇಯಕ

೨) ೧೯೮೭ನೇ ಇಸವಿಯ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕ

೩) ೧೯೮೭ನೇ ಇಸವಿಯ ನೋಂದಣಿ (ಕರ್ನಾಟಕ ತಿದ್ದುಪಡಿ)

೪) ೧೯೮೭ನೇ ಇಸವಿಯ ಕರ್ನಾಟಕ ಕಳ್ಳಬಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕಾರರು, ಗೂಂಡಾಗಳು, ಅನೈತಿಕ ವ್ಯವಹಾರದ ಅಪರಾಧಿಗಳು, ಕೊಳಗೇರಿಗಳನ್ನು ಪತ್ತೆಹಚ್ಚಿ ಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ.

ವರದಿಯನ್ನೊಪ್ಪಿಸುವುದು

ಅಧ್ಯಕ್ಷರು.—ಮಾನ್ಯ ಶ್ರೀ ಲಕ್ಷ್ಮೀನರಸಿಂಹಯ್ಯನವರು (ಉಪಾಧ್ಯಕ್ಷರು), ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೆಯ ವರದಿಯನ್ನೊಪ್ಪಿಸುವುದು.

ಶ್ರೀ ಲಕ್ಷ್ಮೀನರಸಿಂಹಯ್ಯ (ಉಪಾಧ್ಯಕ್ಷರು).—ಸನ್ಮಾನ್ಯ ಅಧ್ಯಕ್ಷರೇ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ಬಿ. ನಾರಾಯಣ ಸ್ವಾಮಿ.—ಸಭೆಯ ವರದಿಯನ್ನು ಒಪ್ಪಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

ಮನವಿಗಳು

ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನ ೧೦೫೦ ಕೋಟಿ ರೂಪಾಯಿಗಳ ಯೋಜನೆಗೆ ಮಂಜೂರಾತಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನಿನ್ನೆಯ ದಿವಸ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಮಾನ್ಯ ದೇವೇಗೌಡರು ಮತ್ತು ಮಾನ್ಯ ಮುಖ್ಯಮಂತ್ರಿಯವರು ಡೆಲ್ಲಿಯಲ್ಲಿ...

ಅಧ್ಯಕ್ಷರು.—ತಾವುಗಳು ನೋಟೀಸ್ ಕೊಟ್ಟಿಲ್ಲ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿಷಯವನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ನಾನು ಮಧ್ಯೆ ಪ್ರವೇಶ ಮಾಡುತ್ತಿಲ್ಲ. ಇದು ಸಂಪ್ರದಾಯ. ಅದು ಏನೆಂದರೆ, ಯಾವುದೇ ಪಾಲಿಸಿ ವಿಷಯ ಇದ್ದರೆ, ಸದನ ನಡೆಯುತ್ತಿರುವಾಗ ಸದನದಲ್ಲಿ ಹೇಳತಕ್ಕಂಥಾದ್ದು ಇದೆ. ಆದರೆ ಮಾನ್ಯ ದೇವೇಗೌಡರು ಒಂದು ಸ್ಟೇಟ್‌ಮೆಂಟ್‌ನ್ನು ಡೆಲ್ಲಿಯಲ್ಲಿಯೇ ಕೊಟ್ಟಿದ್ದಾರೆ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಗ್ಗೆ ನೀರಾವರಿ ಸಚಿವರೊಂದಿಗೆ ಚರ್ಚೆ ಮಾಡಿದ್ದು, ೧೦೫೦ ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ನ್ನು ತಯಾರು ಮಾಡಿದ್ದು, ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ ಎನ್ನುವ ತರಹ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಇಲ್ಲಿ ನನ್ನ ವಿಚಾರ ಏನೆಂದರೆ ಯಾವುದೇ ಸ್ಟೇಟ್‌ಮೆಂಟ್ ಆಗಲಿ ಸದನ ನಡೆಯುತ್ತಿರುವಾಗ ಸದನದಲ್ಲಿಯೇ ಮಾತ್ರ ಅದನ್ನು ಹೇಳತಕ್ಕಂತಹ ಒಂದು ಪದ್ಧತಿ ಇದೆ. ಆದರೆ ಮಾನ್ಯರು ಇವೊತ್ತು ನೇರವಾಗಿ ಡೆಲ್ಲಿಯಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಈ ವಿಷಯ ನೇರವಾಗಿ ನಮ್ಮ ಬಿಜಾಪುರ, ಗುಲ್ಬರ್ಗ, ರಾಯಚೂರು ಜಿಲ್ಲೆಗಳಿಗೆ ಸಂಬಂಧಪಟ್ಟಿದ್ದುದು. ಅಲ್ಲಿಯ ಜನ ನೇರವಾಗಿ ನಮ್ಮನ್ನು ಕೇಳುತ್ತಾರೆ. ಇಂತಹ ಒಂದು ೧೦೫೦ ಕೋಟಿ ರೂಪಾಯಿಗಳ ದೊಡ್ಡ ಪ್ರಾಜೆಕ್ಟ್ ಅಪ್ರೂವ್ ಆದದ್ದು ಸದನದ ಗಮನಕ್ಕೆ ಬಂದಿಲ್ಲ. ಇದು ಹೇಗೆ ಸದನದ ಗಮನಕ್ಕೆ ಬಂದಿಲ್ಲ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಇದರಲ್ಲಿ ಯಾವ ರೀತಿಯ ನೀತಿಯ ವಿಚಾರ ಇಲ್ಲ. ಈ ಒಂದು ಪ್ರಾಜೆಕ್ಟ್ ಬಗ್ಗೆ ಚರ್ಚೆ. ಕಳೆದ ಒಂದು ವರ್ಷದಿಂದ ನಡೆಯುತ್ತಾ ಇದೆ. ವಿಶ್ವಬ್ಯಾಂಕ್‌ನವರು ಆರು ತಿಂಗಳ ಹಿಂದೆ ಬಂದು ಹೋಗಿದ್ದಾರೆ. ಇದು ಎಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಹಂತಹಂತವಾಗಿ ಚರ್ಚೆ ನಡೆಯುತ್ತಾ ಇದೆ. ಕೇಂದ್ರ ಸರ್ಕಾರದ ಜೊತೆ ಚರ್ಚೆ